ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

16

ಪತ್ರಿಕಾ ತುಣುಕುಗಳು

PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಸಾರ್ವಜನಿಕ ಲೆಕ್ಕಪತ್ರ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE :

# ವಿಶೇಷ ಲೆಕ್ಕ ಪರಿಶೀಲನೆಗೆ ನಿರ್ದೇಶನ

ಬೆಂಗಳೂರು: ಕರೊನಾ ಪರಿಕರ, ಉಪಕರಣ ಖರೀದಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ಲೆಕ್ಕ ಪರಿಶೀಲನೆ ನಡೆಸುವಂತೆ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆಯಲ್ಲಿ ಮಹಾಲೆಕ್ಕ ಪರಿಶೋಧಕರಿಗೆ ನಿರ್ದೇಶನ ನೀಡಲಾಗಿದೆ. ಸಭೆಯಲ್ಲಿ ಉಪಸ್ಥಿತರಿದ್ದ ಮಹಾಲೆಕ್ಕ ಪರಿಶೋಧಕರ ಪ್ರತಿನಿಧಿ ಒಂದು ತಿಂಗಳಲ್ಲಿ ಲೆಕ್ಕ ಪರಿಶೀಲಿಸಿ ವರದಿ ಸಲ್ಲಿಸುವುದಾಗಿ ಭರವಸೆ ನೀಡಿದರು. ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಮಿತಿ ಅಧ್ಯಕ್ಷ ಎಚ್.ಕೆ. ಪಾಟೀಲ್, ವೈದ್ಯಕೀಯ ಉಪಕರಣಗಳ ಖರೀದಿ ಬಗ್ಗೆ ಪ್ರತ್ಯೇಕ ಆಡಿಟ್ ಮಾಡುವಂತೆ ಆಡಿಟರ್ ಜನರಲ್‌ಗೆ ಸೂಚಿಸಿದ್ದೇವೆ. 15 ದಿನದಲ್ಲಿ ಈ ಬಗ್ಗೆ ಆಡಿಟ್ ಮಾಡುವಂತೆ ಸಮಿತಿ ನಿರ್ದೇಶಿಸಿದೆ ಎಂದರು. ಬೆಂಗಳೂರಿನಲ್ಲಿ 11 ಸಾವಿರ ಕರೊನಾ ಸೋಂಕಿತರು ನಾಪತ್ತೆಯಾಗಿದ್ದಾರೆ. ಇವರನ್ನು ಹುಡುಕುವ ಪ್ರಯತ್ನ ನಡೆದಿಲ್ಲ. ಅಧಿಕಾರಿಗಳಿಗೆ ಸೂಚನೆ ನೀಡಲಿಲ್ಲ. ಈ ವಿಚಾರದಲ್ಲಿ ಸರ್ಕಾರ ಬೇಜವಾಬ್ದಾರಿಯಾಗಿ ನಡೆದುಕೊಳ್ಳುತ್ತಿದೆ. ಈ ಬಗ್ಗೆ ಸರ್ಕಾರ 24 ಗಂಟೆಯೊಳಗೆ ಉತ್ತರಿಸಬೇಕು ಎಂದು ಎಚ್.ಕೆ.ಪಾಟೀಲ್ ಆಗ್ರಹಿಸಿದರು.

**ಕರೊನಾ ಉಪಕರಣ ಖರೀದಿ**